ಉಳಿದಿರುವ ಅರ್ಜಿಗಳನ್ನು ಆದಷ್ಟು ಶೀಘ್ರವಾಗಿ ವಿಲೇ ಮಾಡುವ ಸಲುವಾಗಿ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ಆದಷ್ಟು ಬೇಗ ಪುನರ್ ರಚಿಸಲಾಗುವುದು.

ಮಹಿಳಾ ಸಹಕಾರಿ ಬ್ಯಾಂಕುಗಳು

695 - ಶ್ರೀ ಎಲ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಮಹಿಳಾ ಸಹಕಾರ ಬ್ಯಾಂಕುಗಳ ಸಂಖ್ಯೆ ಎಷ್ಟು?*

ಆ) *ಮಂಡ್ಯ ಜಿಲ್ಲೆಯಲ್ಲಿ ಮಹಿಳಾ ಬ್ಯಾಂಕ್ ಸ್ಥಾಪಿಸಲು ಉದ್ದೇಶಿಸಲಾಗಿದೆಯೇ? ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ? ಪ್ರವರ್ತಕರುಗಳ ಪಟ್ಟಿ ಸಹಿತ ಸಂಪೂರ್ಣ ವಿವರ ನೀಡುವುದು?*

ಇ) *ಮಹಿಳಾ ಬ್ಯಾಂಕುಗಳನ್ನು ಸ್ಥಾಪಿಸಲು ಸರ್ಕಾರ ಹೆಚ್ಚಿನ ಉತ್ತೇಜನ ಕೊಡುತ್ತಿದೆಯೆ?*

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು 15 ಮಹಿಳಾ ಸಹಕಾರ ಬ್ಯಾಂಕುಗಳ ಸ್ಥಾಪನೆಯಾಗಿವೆ. ಈ ಪೈಕಿ 3 ಹಳೆಯ ಬ್ಯಾಂಕುಗಳಾಗಿದ್ದು ಇತ್ತೀಚೆಗೆ 12 ಮಹಿಳಾ ಬ್ಯಾಂಕುಗಳು ನೋಂದಣಿಯಾಗಿವೆ. ಒಟ್ಟಾರೆ 10 ಬ್ಯಾಂಕುಗಳು ಕಾರ್ಯಾರಂಭ ಮಾಡಿವೆ.

ಆ) ಮಂಡ್ಯ ಜಿಲ್ಲೆಯಲ್ಲಿ ಒಂದು ಮಹಿಳಾ ಬ್ಯಾಂಕ್ ಸ್ಥಾಪಿಸಲು ಉದ್ದೇಶಿಸಿದೆ. ಈ ಬಗ್ಗೆ ದಿನಾಂಕ: 05-01-1992ರಂದು ಆಸಕ್ತ ಮಹಿಳೆಯರು ಸಭೆ ಸೇರಿ ಮುಖ್ಯ ಪ್ರವರ್ತಕರನ್ನು ಹಾಗೂ ಪ್ರವರ್ತಕರವರನ್ನು ಆರಿಸಿ ಮಹಿಳಾ ಬ್ಯಾಂಕ್ ಸ್ಥಾಪನೆಗೆ ಪ್ರಸ್ತಾವೆ ಸಲ್ಲಿಸಿದ್ದರು. ಇದರಲ್ಲಿ ಹಲವು ನ್ಯೂನತೆಗಳಿದ್ದು ಸರಿಪಡಿಸಲು ಸೂಚಿಸಲಾಗಿತ್ತು. ಅದರಂತೆ ಸಹಕಾರ ಕ್ಷೇತ್ರದಲ್ಲಿ ಅನುಭವವಿದ್ದ ಪ್ರವರ್ತಕರನ್ನು ಮತ್ತು ತಾಲ್ಲೂಕುವಾರು ಪ್ರತಿನಿಧಿಗಳನ್ನು ಆಯ್ಕೆ ಮಾಡಲು ನೀಡಲಾದ ಸೂಚನೆಯಂತೆ ದಿನಾಂಕ: 18-08-1994ರಂದು ಆಸಕ್ತ ಮಹಿಳೆಯರು ಹೊಸದಾಗಿ ಸಭೆ ಸೇರಿ ಪ್ರವರ್ತಕರುಗಳನ್ನು ಆಯ್ಕೆ ಮಾಡಿರುತ್ತಾರೆ. ಆದರೆ ಸಭೆಯಲ್ಲಿ ಮುಖ್ಯ ಪ್ರವರ್ತಕರ ಆಯ್ಕೆ ಬಗ್ಗೆ ವಿವಾದ ಇತ್ಯರ್ಥರಾದ ನಂತರ ಪ್ರಸ್ತಾವೆ ಪಡೆದು ನೋಂದಣಿಗೆ ಕ್ರಮವಿಡಲಾಗುವುದು. ಎರಡು ಸಲ ಆಯ್ಕೆಯಾದ ಪ್ರವರ್ತಕರ ಪಟ್ಟಿಯನ್ನು ಲಗತ್ತಿಸಿದೆ.

ಇ) ಹೌದು.

ನಿಯೋಜಿತ ಮಂಡ್ಯ ಜಿಲ್ಲಾ ಪ್ರಾಥಮಿಕ ಮಹಿಳಾ ಸಹಕಾರಿ ಪಟ್ಟಣ ಬ್ಯಾಂಕ್, ಲಿ, ಮಂಡ್ಯ. ದಿನಾಂಕ 18-8-1994 ರಂದು ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿರುವ ಆಸಕ್ತ ಮಹಿಳೆಯರ ಸಭೆಯಲ್ಲಿ ಆರಿಸಲಾದ ಪ್ರವರ್ತಕರ ಪಟ್ಟಿ.

		ಶ್ರೀಮತಿಯರಾದ
1.	ಮಂಡ್ಯ ನಗರ	1) ಎಸ್.ಎಸ್. ಶಾರದ ರಮೇಶ್ ರಾಜ್, ಕೋಂ ಶ್ರೀ ರಮೇಶ ರಾಜು, ಮಂಡ್ಯ 2) ಅಂಬುಜಮ್ಮ ಕೋ. ಚಿನ್ನೇಗೌಡ, 2ನೇ ಕ್ರಾಸ್ ಶಂಕರನಗರ, ಮಂಡ್ಯ. 3) ರತ್ನರಮರಾಜಯ್ಯ, ಕೋಂ ಡಾ. ಕೆ.ಪಿ. ರಾಮರಾಜಯ್ಯ, ಶ್ರೀ ಕೋ ಡಾ ಶ್ರೀ ನಿಲಯ, ಮರೀಗೌಡ ಬಡಾವಣೆ, 5ನೇ ಕ್ರಾಸ್, ಕ್ಯಾತಂಗೆರೆ ಮಂಡ್ಯ
2.	ಮಂಡ್ಯ ಗ್ರಾಮಾಂತರ	ಕ್ಷೇತ್ರದ ಶಕುಂತಲ ತಮ್ಮಣ್ಣ ಕೋಂ ತಮ್ಮಣ್ಣ, ಚಿಂದಗಾಲು, ಮಂಡ್ಯ.
3.	ಮದ್ದೂರು ಕ್ಷೇತ್ರ	1. ಭಾಗ್ಯಲ್ಲೂ ನಾಗೇಶ್, ಕೋಂ ಶ್ರೀ ನಾಗೇಶ್, ತೋಟದ ಮನೆ, ಮದ್ದೂರು. 2. ಜಯಶ್ರೀ ಸುದಿನೀರ್ ಕೋಂ ಸುಧೀಲರ್, ಮದ್ದೂರು. 3. ಸೌಭಾಗ್ಯ ಮಹದೇವು, ಕೋಂ ಮಹದೇಶ, ಅಧ್ಯಕ್ಷರು, ಮದ್ದೂರು ತಾಲ್ಲೂಕು ಮಹಿಳಾ ಒಕ್ಕೂಟ, ಮದ್ದೂರು.
4.	ಕಿರುಗಾವಲು ಕ್ಷೇತ್ರ	ಲಕ್ಷ್ಮಿ ಮಂಜುಳ ಕೋಂ ಡಾ: ಬೋರೇಗೌಡ, ಎ.ಜಿ.ಕಾಲೋನಿ ಭಾರತೀನಗರ (ಕೆ.ಎಂ. ದೊಡ್ಡಿ) ಮದ್ದೂರು ತಾಲ್ಲೂಕು.
5.	ಮಳವಳ್ಳಿ ಕ್ಷೇತ್ರ	1. ಶಕುಂತಲಾ ಮಲ್ಲಿಕ್, ಕೋಂ ಕೆ. ಮಲ್ಲಿಕಾರ್ಜುನಯ್ಯ ಪುರಸಭಾ ಸದಸ್ಯರು, 1ನೇ ಡಿವಿಜನ್, ಮಳವಳ್ಳಿ, 2. ಮಲ್ಲಾಜಮ್ಮ ಮಾಜಿ ಶಾಸಕಿ, ಮಳವಳ್ಳಿ ಕ್ಷೇತ್ರ.

6.	ನಾಗಮಂಗಲ ಕ್ಷೇತ್ರ	ಪುಟ್ಟಮ್ಮ ಮಾಯಾಣ್ಣಗೌಡ, ಕೋಂ ಮಾಯಣ್ಣಗೌಡ ಟಿ.ಜಿ. ಎಕ್ಸ್‌ಟೆನಷನ್, ನಾಗಮಂಗಲ.
7.	ಶ್ರೀರಂಗಪಟ್ಟಣ ಕ್ಷೇತ್ರ	ಶ್ರೀ ನಂಜಂಡಯ್ಯ ಕೋಂ ದಿ. ನಂಜುಂಡಯ್ಯ ಗಂಜಾಂ, ಶ್ರೀರಂಗಪಟ್ಟಣ ತಾಲ್ಲೂಕು ಗಿರಿಜನ ಮಹಿಳೆಯರಿಗೆ ಒಂದು ಸ್ಥಾನ ಕಾದಿರಿಸಿದ್ದು ಈ ಸ್ಥಾನಕ್ಕೆ ಹೆಸರು ಪಡೆದು ಸೂಚಿಸಬೇಕಾಗುತ್ತೆ.
8.	ಕೆ.ಆರ್. ಪೇಟೆ ಕ್ಷೇತ್ರ	ಎನ್.ಟಿ. ಸುಭಾಷಿಣಿ, ಕೋಂ ವಿಜಯಕುಮಾರ್ ಅಡ್ವೋಕೇಟ್, ಕಕ್ಕೇರಿ ರಸ್ತೆ, ಕೆ.ಆರ್. ಪೇಟೆ
9.	ಪಾಂಡವಪುರ ಕ್ಷೇತ್ರ	ಬಿ. ಶಾರದಮ್ಮ ಕೋಂ ಚಂದ್ರಶೇಖರ್, ಕ್ಯಾತನಹಳ್ಳಿ, ಪಾಂಡವಪುರ ತಾ.

ಈ ಸಭೆಯಲ್ಲಿ ಮುಖ್ಯ ಪ್ರವರ್ತಕರ ಆಯ್ಕೆಗೆ ಅನೇಕ ಬಿನ್ನಾಭಿಪ್ರಾಯಗಳು ಉದ್ಭವವಾಗಿ ಗೊಂದಲವಾದ್ದರಿಂದ ಮುಖ್ಯ ಪ್ರವರ್ತಕರ ಆಯ್ಕೆ ನಡೆದಿರುವುದಿಲ್ಲ.

ವಿ.ಸೂ. :- 1. ಮಂಡ್ಯ ಗ್ರಾಮಾಂತರ ಕ್ಷೇತ್ರಕ್ಕೆ ಸೂಚಿಸಿರುವ ಶ್ರೀಮತಿ ಶಕುಂತಲಾ ತಮ್ಮಣ್ಣ ಕೋಂ ತಮ್ಮಣ್ಣ ಚಂದಗಾಲು ಇವರು ವ್ಯಕ್ತಿಗತ ಮಾಹಿತಿಯನ್ನು ಕಳುಹಿಸಿರುವುದಿಲ್ಲ.

2. ಮಾನ್ಯ ಶ್ರೀ ಶಿವರಾಮೇಗೌಡ, ಶಾಸಕರು, ನಾಗಮಂಗಲ ಇವರು ದಿನಾಂಕ 23-1-1995ರಲ್ಲಿ ಉಪನಿಬಂಧಕರಿಗೆ ಟಿಪ್ಪಣಿ ಕಳುಹಿಸಿದ್ದು, ಆ ಟಿಪ್ಪಣಿಯಲ್ಲಿ ಶ್ರೀಮತಿ ಲಲಿತಾ ಶ್ರೀನಿವಾಸ್ ಲಕ್ಕೇಗೌಡನಕೊಪ್ಪಲು, ನಾಗಮಂಡಲ ತಾಲ್ಲೂಕ್, ಇವರ ಹೆಸರನ್ನು ಪ್ರವರ್ತಕರ ಪಟ್ಟಿಗೆ ಸೇರಿಸಲು ಸೂಚಿಸಿರುತ್ತಾರೆ.

ನಿಯೋಜಿತ ಮಂಡ್ಯ ಜಿಲ್ಲಾ ಪ್ರಾಥಮಿಕ ಮಹಿಳಾ ಸಹಕಾರಿ ಪಟ್ಟಣ ಬ್ಯಾಂಕ್ ನಿ, ಮಂಡ್ಯ. ದಿನಾಂಕ: 5-1-1992ರಲ್ಲಿ ಸಭೆ ಸೇರಿ ಚುನಾಯಿಸಿರುವ ಪ್ರವರ್ತಕರ ಪಟ್ಟಿ:

1) ಶ್ರೀಮತಿ ಪುಟ್ಟಮ್ಮ ಮಾಯಣ್ಣಗೌಡ ಕೋಂ ಶ್ರೀ ಮಾಯಣ್ಣಗೌಡ, ಎಕ್ಸ್‌ಟೆನಷನ್ ನಾಗಮಂಗಲ, ಮುಖ್ಯ ಪ್ರವರ್ತಕರು.
2) ಶ್ರೀಮತಿ ಎಂ. ರತ್ನಮ್ಮಣ್ಣಿ, ಮನೆ ಸಂಖ್ಯೆ: 2584, 1ನೇ ಕ್ರಾಸ್, ಗಾಂಧೀನಗರ, ಮಂಡ್ಯ ಪ್ರವರ್ತಕರು.
3) ಶ್ರೀಮತಿ ನಾಗರತ್ನ, ನಂ. 446, 100 ಅಡಿ ರಸ್ತೆ, ಗಾಂಧೀನಗರ, ಮಂಡ್ಯ- ಪ್ರವರ್ತಕರು.
4) ಶ್ರೀಮತಿ ರಾಧ ಎನ್. ಗೌಡ, ನಂ.53618, 2ನೇ ಕ್ರಾಸ್, ಸುಭಾಷನಗರ, ಮಂಡ್ಯ-ಪ್ರವರ್ತಕರು.

5) ಶ್ರೀಮತಿ ಆರ್. ಶ್ಯಾಮಲಾ ರಾಜಶೇಖರ್, ನಂ 1857, 6ನೇ ಕ್ರಾಸ್, ಸುಭಾಷ್‌ನಗರ, ಮಂಡ್ಯ - ಪ್ರವರ್ತಕರು.

6) ಶ್ರೀಮತಿ ಕೆ.ಆರ್. ವೀಣಾ, ನಂ.121, 2ನೇ ಕ್ರಾಸ್, ಸಿ ಜಿ ದೊಡ್ಡಿ, ಮಂಡ್ಯ-ಪ್ರವರ್ತಕರು.

7) ಶ್ರೀಮತಿ ಸಿ.ವಿಜಯಲಕ್ಷ್ಮಿ ನಂ.1686, 100 ಅಡಿ ರಸ್ತೆ, ವಿದ್ಯಾನಗರ, ಮಂಡ್ಯ - ಪ್ರವರ್ತಕರು.

8) ಶ್ರೀಮತಿ ಮಮ್ತಾಜ್ ಪಾತೀಮಾ ಬಾನು, ನಂ 2406, 4ನೇ ಕ್ರಾಸ್, ಗಾಂಧಿನಗರ, ಮಂಡ್ಯ-ಪ್ರವರ್ತಕರು.

9) ಶ್ರೀಮತಿ ಜಯಲಕ್ಷ್ಮಿ ಮಾದಯ್ಯ, ಕೆಇಬಿ ಕಾಲೋನಿ, ಚಾಮುಂಡೇಶ್ವರಿ ನಗರ, ಮಂಡ್ಯ, ಪ್ರವರ್ತಕರು.

10) ಶ್ರೀಮತಿ ಬಿ.ಎಂ. ಜಯಸೋಮಶೇಖರ್, ನಂ.2631, 1ನೇ ಕ್ರಾಸ್, ಗಾಂಧಿನಗರ, ಮಂಡ್ಯ - ಪ್ರವರ್ತಕರು.

11) ಶ್ರೀಮತಿ ಆರ್.ಆರ್. ಛಾಯ ಗೌಡ, ಮಾದೇಶ್ವರ ಗ್ರಾಮ, ಪಾಂಡವರಪುರ ತಾಲ್ಲೂಕು, ಪ್ರವರ್ತಕರು.

12) ಶ್ರೀಮತಿ ಪಾರ್ವತಮ್ಮ, ಆನಗೋಳ ಗ್ರಾಮ, ಕೆ.ಆರ್. ಪೇಟೆ ತಾಲ್ಲೂಕು.

13) ಶ್ರೀಮತಿ ಸುಜಾತ ಕಾಮತ್, ನಂ 1397, ನೆಹರೂ ನಗರ, 3ನೇ ಕ್ರಾಸ್, ಮಂಡ್ಯ-ಪ್ರವರ್ತಕರು.

14) ಶ್ರೀಮತಿ ಶೀಲಾ ನಂಜುಂಡಯ್ಯ, ಗಂಜಾಂ ಶ್ರೀರಂಗಪಟ್ಟಣ ತಾಲ್ಲೂಕು-ಪ್ರವರ್ತಕರು.

15) ಶ್ರೀಮತಿ ಅನುಸೂಯಮ್ಮ ಕಾಲಂಗೆರೆ ಲೇಔಟ್, ಮಂಡ್ಯ - ಪ್ರವರ್ತಕರು.

ರಾಜ್ಯದಲ್ಲಿ ಅನಾವೃಷ್ಟಿಗೆ ಒಳಗಾಗಿರುವ ಜಿಲ್ಲೆಗಳು.

689 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನಾವೃಷ್ಟಿ ಉಂಟಾಗಿರುವ ಜಿಲ್ಲೆಗಳಾವುವು?

ಆ) ಆ ಜಿಲ್ಲೆಗಳಲ್ಲಿ ಬೆಳೆ ಪ್ರಮಾಣವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಇ) ಮಂಡ್ಯ ಜಿಲ್ಲೆಯಲ್ಲಿ ಅನಾವೃಷ್ಟಿ ಉಂಟಾಗಿರುವ ತಾಲ್ಲೂಕುಗಳಾವುವು, ಅದರಿಂದ ಹಾಳಾದ ಬೆಳೆ ಪ್ರಮಾಣ ಎಷ್ಟು?

ಈ) ರಾಜ್ಯದ್ಯಂತ ಅನಾವೃಷ್ಟಿ ಉಂಟಾದ ಹಾನಿಯ ಬಗ್ಗೆ ಸರ್ಕಾರ ಕೈಗೊಂಡ ಪರಿಹಾರ ಕ್ರಮಗಳೇನು?

ಉ) 1994-95ನೇ ಸಾಲಿನಲ್ಲಿ ಅನಾವೃಷ್ಟಿಯಿಂದ ರೈತರ ಬೆಳೆಗೆ ತೊಂದರೆ-ಯಾಗಿರುವ ಜಮೀನಿನ ವಿವರಗಳೆಷ್ಟು? (ಜಿಲ್ಲಾವಾರು ವಿವರ ಒದಗಿಸುವುದು)